ದಿನಾಂಕಃ 19.02.2026

ಅಸಲುದಾವಃ 27/2021

ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಟಿ.ಎಸ್.ಎಸ್. ವಕೀಲರಿಂದಃ

ರುದ್ರಮುನಿಯವರಿಗೆ 20 ಅಡಿ ಅಗಲ 80 ಅಡಿ ಉದ್ದದ ಜಾಗವನ್ನು ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಮಾಡಿದ ಕ್ರಯ ಪತ್ರಕ್ಕೆ ನಾವು ಸಹಿ ಹಾಕಿಲ್ಲ ನಮ್ಮ ತಂದೆ ಸಹಿ ಹಾಕಿ ನೊಂದಣಿ ಮಾಡಿಕೊಟ್ಟಿದ್ದಾರೆ. ರುದ್ರಮುನಿಯವರಿಗೆ ಮಾಡಿಕೊಟ್ಟಿರುವ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಆ ಕ್ರಯ ಪತ್ರದಲ್ಲಿ ಏನು ಚೆಕ್ಕುಬಂದಿ ನಮೂದಿಸಲಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಚೆಕ್ಕುಬಂದಿಯನ್ನು ಆ ಸ್ವತ್ತಿನ ಬಾಜುದಾರರು ಯಾರು ಯಾರು ಇರುತ್ತಾರೋ ಅವರ ಸ್ವತ್ತನ್ನು ನಮೂದಿಸಲಾಗುತ್ತದೆ ಎಂದರೆ ಸರಿ. ನಾಲ್ಕು ದಾವ ಸ್ವತ್ತುಗಳ ಖಾತೆ 1996 ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ನಮ್ಮ ತಂದೆ ದಾಸಪ್ಪನವರ ಹೆಸರಿನಲ್ಲಿಯೇ ಇದ್ದವು ಎಂದು ಉತ್ತರಿಸುತ್ತಾರೆ. ಆ ಸಂಬಂದ ಯಾವುದಾದರು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನಿಪಿ-2 ಪಟ್ಟಾ ಪುಸ್ತಕ ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ 2021 ನೇ ಸಾಲಿನ ಪಟ್ಟಾ ಪುಸ್ತಕ ಎಂದು ಉತ್ತರಿಸುತ್ತಾರೆ. ಪಟ್ಟಾ ಪುಸ್ತಕದಲ್ಲಿ ನಮೂದಿರುವ ಸ್ವತ್ತಿನ ಸಂಖ್ಯೆ 422 ರ ಪೂರ್ವಕ್ಕೆ ಕೆ.ತಿಮ್ಮೇಗೌಡರವರು ಇರುತ್ತಾರೆ. ಸದರಿ ಕೆ.ತಿಮ್ಮೇಗೌಡ ರವರು ಈ ದಾವೆಯ 3 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಸದರಿ ಸ್ವತ್ತಿನ ಸಂಖ್ಯೆ 422 ಪಶ್ಚಿಮಕ್ಕೆ ಜಯಲಕ್ಷ್ಮಮ್ಮ ಇರುತ್ತಾರೆ. ಸದರಿ ಜಯಲಕ್ಷ್ಮಮ್ಮ ಈ ದಾವೆಯ 1 ನೇ ಪ್ರತಿವಾದಿ ಸೌಮ್ಯರವರ ತಾಯಿ ಎಂದರೆ ಸರಿ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳು 1996 ರಲ್ಲಿಯೇ 4 ನೇ ಪ್ರತಿವಾದಿ ಕೆ.ತಿಮ್ಮೇಗೌಡರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈಗ ದಾವ ಸ್ವತ್ತುಗಳು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ತಂದೆಯವರ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ ದಾವ ಸ್ವತ್ತುಗಳ ಖಾತೆ ಇದೆ ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಗಳನ್ನು ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ-54 ಅನ್ನು ತೋರಿಸಿ ದಾವ ಸ್ವತ್ತು ಈಗ ಯಾರ

ಹೆಸರಿನಲ್ಲಿ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಸೌಮ್ಯರವರ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನಿಪಿ-6 ಅನ್ನು ಸಾಕ್ಷಿಗೆ ತೋರಿಸಿ ದಾವ ಷೆಡ್ಯೂಲ್ ಸಿ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಕೆ.ತಿಮ್ಮೇಗೌಡರ ಹೆಸರಿನಲ್ಲಿ ಇದೆ ಎಂದು ಉತ್ತರಿಸುತ್ತಾರೆ. 1996ರಲ್ಲಿಯೇ ದಾವ ಷೆಡ್ಯೂಲ್ ಸಿ ಸ್ವತ್ತಿನ ಖಾತೆ ಅವರ ಹೆಸರಿನಲ್ಲಿಯೇ ಬರುತ್ತಿತ್ತು ನಂತರ 2019ರಲ್ಲಿ ಕೆ.ತಿಮ್ಮೇಗೌಡರ ಹೆಸರಿಗೆ ಇ-ಖಾತ ಮಾಡಲಾಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಯಾವುದೇ ಸ್ವತ್ತಿನ ಇ-ಖಾತ ಮಾಡುವ ಸಮಯದಲ್ಲಿ ಪಂಚಾಯಿತಿಯವರು ಸ್ಥಳ ಪರಿಶೀಲನೆ ಮಾಡಿ ಆ ನಂತರ ಇ-ಖಾತ ಮಾಡುತ್ತಾರೆ ಎಂದರೆ ಸರಿ. ಹಾಗೆಯೇ ಆ ಸ್ವತ್ತಿನ ಬಾಜುದಾರರಿಗೆ ನೋಟೀಸ್ ನೀಡಿ ಅವರ ಅನುಮತಿಯಮೇರೆಗೆ ಇ-ಸ್ವತ್ತಿನ ಖಾತೆಯನ್ನು ಅಂಗಿಕರಿಸುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಎಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ನಿಮ ತಂದೆ, ತಾಯಿ ಹಾಗು ನಿಮ್ಮ ಸಹಿ ಎಂದು ಸಹಿಗಳನ್ನು ತೋರಿಸಿ ಸೂಚಿಸಿದ ಪ್ರಶ್ನೆಗೆ ಸಾಕ್ಷಿ ತಮ್ಮ ತಂದೆಯ ಸಹಿ ಹಾಗು ತಾಯಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯಲ್ಲಿ ಸಾಕ್ಷಿದಾರರು ತಮ್ಮ ತಂದೆ ಮತ್ತು ತಾಯಿಯ ಸಹಿಯನ್ನು ಗುರುತಿಸಿರುವುದರಿಂದ ನಿಡಿ-1 ಎಂದು ಮತ್ತು ಸಹಿಗಳನ್ನು ನಿಡಿ1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆ, ತಾಯಿ ಹಾಗು ನಿಮ್ಮ ಸಹಿ ಎಂದು ಸಹಿಗಳನ್ನು ತೋರಿಸಿ ಸೂಚಿಸಿದ ಪ್ರಶ್ನೆಗೆ ಸಾಕ್ಷಿ ತಮ್ಮ ತಂದೆಯ ಸಹಿ ಹಾಗು ತಾಯಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯಲ್ಲಿ ಸಾಕ್ಷಿದಾರರು ತಮ್ಮ ತಂದೆ ಮತ್ತು ತಾಯಿಯ ಸಹಿಯನ್ನು ಗುರುತಿಸಿರುವುದರಿಂದ ನಿಡಿ-2 ಎಂದು ಮತ್ತು ಸಹಿಗಳನ್ನು ನಿಡಿ2(ಎ) ಮತ್ತು 2(ಬಿ) ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ದಾಖಲಾತಿಗಳು ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳನ್ನು ಇ-ಖಾತ ಮಾಡುವ ಸಮಯದಲ್ಲಿ ಪಂಚಾಯಿತಿಯವರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿದ ಸಮಯದಲ್ಲಿ ನೀವು, ನಿಮ್ಮ ತಂದೆ, ನಿಮ್ಮ ತಂದೆ ಹಾಜರಿದ್ದು ಆ ದಾಖಲಾತಿಗಳಿಗೆ ಸಹಿ ಮಾಡಿರುವುದು ಎಂದರೆ ಸಾಕ್ಷಿ ನಂಬಿಸಿ ಆ ಸಹಿ ಮಾಡಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಸ್ಥಳ ಪರಿಶೀಲನೆಗೆ ಎಷ್ಟು ಜನ ಬಂದಿದ್ದರು ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ವಿದ್ಯಾವಂತ ಪದವಿದರರಾಗಿದ್ದರು ಎಂದರೆ ಸರಿ. ದಾವ ಬಿ ಮತ್ತು ಸಿ ಸ್ವತ್ತುಗಳನ್ನು ನಿಮ್ಮ ತಂದೆ ಕುಟುಂಬದಲ್ಲಿ ಆದ ವ್ಯವಸ್ಥಾ ಪತ್ರದ ಮೂಲಕ 3 ಮತ್ತು 4ನೇ

ಪ್ರತಿವಾದಿಗಳಾದ ಗಿರಿಶ್ ಕುಮಾರ್ ಮತ್ತು ಕೆ.ತಿಮ್ಮೇಗೌಡರವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವ್ಯವಸ್ಥಾ ಪತ್ರದ ಮೂಲಕ ದಾವ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತುಗಳು ಪ್ರತಿವಾದಿ 3 ಮತ್ತು 4 ರವರ ಬಾಗಕ್ಕೆ 1996 ರಲ್ಲಿಯೇ ಬಂದಿದ್ದು ಅವರ ಹೆಸರಿಗೆ ಖಾತೆಯಾಗಿ ಅಲ್ಲಿಂದ ಇಲ್ಲಿಯವರೆಗೆ ಬಂದಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದರಂತೆ ದಾವ ಬಿ, ಸಿ ಮತ್ತು ಡಿ ಸ್ವತ್ತುಗಳು ಕಂದಾಯ ದಾಖಲಾತಿಗಳಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ನಮೂದಾಗಿ ಅವರೇ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದು ಕಂದಾಯ ಪಾವತಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದರಂತೆ ಪ್ರತಿವಾದಿ 3,4 ಮತ್ತು 5 ರವರು ದಿ.16.01.2021 ರಂದು 2 ನೇ ಪ್ರತಿವಾದಿಯ ಹೆಸರಿಗೆ ದಾವ ಬಿ, ಸಿ ಮತ್ತು ಡಿ ಸ್ವತ್ತುಗಳನ್ನು ನೊಂದಾಯಿತ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳಲ್ಲಿ ನಿಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಖಾತೆಯನ್ನು ಬೇರೆ ಯಾವುದಾದರು ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ ಮೆಣಸಗೆರೆ ಗ್ರಾಮ ಪಂಚಾಯಿತಿಯಲ್ಲಿ ಪ್ರಶ್ನೆ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. ಆ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಮೆಣಸಗೆರೆ ಗ್ರಾಮ ಪಂಚಾಯಿತಿಯವರು ಕೊಟ್ಟಿರುವ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.